ಬೇಸಿಗೆ ಭತ್ತಕ್ಕೆ ಪರ್ಯಾಯವಾಗಿ ಉದ್ದಿನ ಬೆಳೆ

ರಾಯಚೂರು ಜಿಲ್ಲೆಯ ಅಚ್ಚುಕಟ್ಟು ಪ್ರದೇಶಗಳಲ್ಲಿ ಭತ್ತವನ್ನು ಸುಮಾರು 2.5 ಲಕ್ಷ ಎಕರೆ ಪ್ರದೇಶದಲ್ಲಿ ಮುಂಗಾರು ಬೆಳೆಯಾಗಿ ಹಾಗೂ 1 ಲಕ್ಷ ಎಕರೆ ಪ್ರದೇಶದಲ್ಲಿ ಬೇಸಿಗೆ ಬೆಳೆಯಾಗಿ ಬೆಳೆಯಲಾಗುತ್ತಿದೆ. ಆದರೆ ಬೇಸಿಗೆ ಭತ್ತ ಬೆಳೆ ಬೆಳೆಯುವುದರಿಂದ ಅನೇಕ ತೊಂದರೆಗಳು ಉದ್ಭವಿಸುತ್ತಿದ್ದು, ಅದರಲ್ಲಿ ಪ್ರಮುಖವಾಗಿ ಸಮಯಕ್ಕೆ ಸರಿಯಾಗಿ ನೀರು ಸಿಗದೆ ಇರುವುದು, ಅಸಮರ್ಪಕ ನೀರಿನ ಬಳಕೆ, ಕಾಲುವೆ ಕೊನೆ ಭಾಗದ ರೈತರಿಗೆ ನೀರು ದೊರಕದೆ ಇರುವುದು ಇತ್ಯಾದಿ. ಈ ಎಲ್ಲಾ ಸಮಸ್ಯೆಗಳೊಂದಿಗೆ ಭತ್ತ–ಭತ್ತ ಸದರಿ ಬೆಳೆಯಾಗಿ ಬೆಳೆಯುವುದರಿಂದ ಸಾಕಷ್ಟು ತೊಂದರೆ ಪಡಬೇಕಾಗುತ್ತದೆ. ಈ ಸಮಸ್ಯೆಗೆ ಪರಿಹಾರವಾಗಿ ಭತ್ತ–ಭತ್ತ ಬೆಳೆ ಪದ್ಧತಿಗೆ ಪರ್ಯಾಯವಾಗಿ ಭತ್ತ–ಉದ್ದು ಬೆಳೆ ಪದ್ಧತಿ ಅನುಸರಿಸುವುದು ಸೂಕ್ತ.

ಉದ್ದು ಕಡಿಮೆ ಅವಧಿಯಲ್ಲಿ ಅಂದರೆ ಸುಮಾರು 80–85 ದಿನಗಳಲ್ಲಿ ಕೊಯ್ಲಿಗೆ ಬರುವ ಬೆಳೆಯಾಗಿದ್ದು ಈ ಬೆಳೆಯನ್ನು ಭತ್ತದ ಕಟಾವು ಆದ ನಂತರ ಕಡಿಮೆ ತೇವಾಂಶದಲ್ಲಿ ಬೆಳೆದು ಲಾಭ ಪಡೆದುಕೊಳ್ಳಬಹುದಲ್ಲದೆ ರಾಯಚೂರು ಜಿಲ್ಲೆಯಲ್ಲಿ ಭತ್ತ ಕಟಾವು ಆದ ನಂತರ ಈ ಬೆಳೆಯನ್ನು ಬೆಳೆಯಲು ಪ್ರಾರಂಭಿಸಿದರೆ ಸುಮಾರು 50,000–1,00,000 ಎಕರೆ ಪ್ರದೇಶದವರೆಗೂ ವಿಸ್ತರಿಸಬಹುದು. ಉತ್ತಮ ಇಳುವರಿಗೆ ವೈಜ್ಞಾನಿಕ ಬೇಸಾಯ ಪದ್ಧತಿ ಅನುಸರಿಸುವುದು ಅತೀ ಅವಶ್ಯಕ. ಆದ್ದರಿಂದ ರೈತರು ಈ ಕೆಳಗೆ ವಿವರಿಸಲಾದ ಸುಧಾರಿತ ಬೇಸಾಯ ಪದ್ಧತಿಯ ಲಾಭ ಪಡೆದುಕೊಳ್ಳಲು ವಿನಂತಿಸಲಾಗಿದೆ.

ತಳಿ : ಡಿ.ಯು.–1, ಈ ತಳಿಯು 80–85 ದಿನಗಳಲ್ಲಿ ಮಾಗುವುದಲ್ಲದೆ ಭತ್ತ ಕಟಾವು ಆದ ನಂತರ ತಡ ಹಿಂಗಾರಿ ಹಾಗೂ ಬೇಸಿಗೆ ಬೆಳೆಯಾಗಿ ಬಿತ್ತನೆಗೆ ಯೋಗ್ಯವಿರುವುದು.

ಬೀಜ ಕಠಿಣಗೊಳಿಸುವಿಕೆ : ಬೆಳೆಯ ಬೆಳವಣಿಗೆ ಹಂತಗಳಲ್ಲಿ ಬರ ನಿರೋಧಕತೆ ಹೆಚ್ಚಿಸಲು ಬಿತ್ತನೆ ಬೀಜವನ್ನು ಶೇಕಡಾ 2 (20 ಗ್ರಾಂ ಪ್ರತಿ ಲೀಟರ್ ನೀರಿನಲ್ಲಿ) ಸುಣ್ಣದ ಕ್ಲೋರೈಡ್‌ನಲ್ಲಿ ಅರ್ಧ ಗಂಟೆಗಳ ಕಾಲ ನೆನಸಿ ನಂತರ 7 ತಾಸು ನೆರಳಿನಲ್ಲಿ ಒಣಗಿಸಬೇಕು.

ಬೀಜೋಪಚಾರ : ಒಂದು ಎಕರೆಗೆ ಬೇಕಾಗುವ ಬಿತ್ತನೆ ಬೀಜಕ್ಕೆ (6–7 ಕಿ.ಗ್ರಾಂ) 200 ಗ್ರಾಂ ರೈಜೋಬಿಯಂ, 200 ಗ್ರಾಂ ರಂಜಕ ಕರಗಿಸುವ ಜೈವಿಕ ಗೊಬ್ಬರ ಹಾಗೂ 30 ಗ್ರಾಂ ಟ್ರೈಕೋಡರ್ಮಾ ಜೈವಿಕ ಶಿಲೀಂಧ್ರ ನಾಶಕ ಪುಡಿಯಿಂದ ಬೀಜೋಪಚಾರ ಮಾಡಬೇಕು.

ಬಿತ್ತನೆ : ಭತ್ತ ಕಟಾವು ಆದ ನಂತರ ಭೂಮಿಗೆ ಟಿಲ್ಲರ್ ಹಾಕಿ ನಂತರ ನೀರಿನ ಸೌಲಭ್ಯವಿದ್ದಲ್ಲಿ ಒಂದು ಸಲ ನೀರು ಹಾಯಿಸಿ ನಂತರ ಬಿತ್ತನೆ ಮಾಡಬೇಕು. ಅಥವಾ ಭೂಮಿಯಲ್ಲಿ ತೇವಾಂಶವಿದ್ದರೆ ರಿಲೆ ಪ್ಲಾಂಟರ್ ಅಥವಾ ಟ್ರ್ಯಾಕ್ಟರ್ ಚಾಲಿತ ಕುರಿಗೆಯಿಂದ ನೇರವಾಗಿ ಬಿತ್ತನೆ ಮಾಡಬಹುದು. ಬಿತ್ತನೆಯನ್ನು 30 ಸೆಂ.ಮೀ. ಅಂತರದ ಸಾಲುಗಳಲ್ಲಿ ಬೀಜದಿಂದ ಬೀಜಕ್ಕೆ 7.5–10 ಸೆಂ.ಮೀ. ಅಂತರದಲ್ಲಿ ಬಿತ್ತನೆ ಮಾಡಬೇಕು.

ಗೊಬ್ಬರ: ಬಿತ್ತನೆ ಸಮಯದಲ್ಲಿ ಪ್ರತಿ ಎಕರೆಗೆ 50 ಕಿ.ಗ್ರಾಂ ಡಿ.ಎ.ಪಿ. ಹಾಗೂ 40 ಕಿ.ಗ್ರಾಂ ಜಿಪ್ಸಂ ರಾಸಾಯನಿಕ ಗೊಬ್ಬರಗಳನ್ನು ಬಿತ್ತನೆ ಬೀಜದಿಂದ 10 ಸೆಂ.ಮೀ. ದೂರವಿರುವಂತೆ ಮಣ್ಣಿನಲ್ಲಿ ಸೇರಿಸಬೇಕು.

ಅಂತರ ಬೇಸಾಯ ಹಾಗೂ ಕಳೆ ನಿಯಂತ್ರಣ : ಬಿತ್ತನೆ ಮಾಡಿದ 20–25 ದಿನಗಳಿಗೆ ಹಾಗೂ 35–40 ದಿನಗಳಿಗೆ ಎರಡು ಸಲ ಅಂತರ ಬೇಸಾಯ ಮಾಡಿ ಕಳೆಗಳನ್ನು ಹತೋಟಿ ಮಾಡಬೇಕು. ಉದ್ದಿನ ಬೆಳೆಯಲ್ಲಿ ಬೀಜ ಬಿತ್ತಿದ 2 ದಿನಗಳ ಒಳಗಾಗಿ ಪ್ರತಿ ಎಕರೆಗೆ 1.2 ಲೀ. ಫ್ಲುಕೋರಾಲಿನ್ 45 ಇ.ಸಿ. ಅಥವಾ 1.6 ಲೀ. ಅಲಾಕ್ಲೋರ್ 50 ಇ.ಸಿ. ಕಳೆನಾಶಕಗಳನ್ನು ಸಿಂಪಡಿಸಬೇಕು. ಹಾಗೂ ಬಿತ್ತಿದ 25–30 ದಿವಸಗಳ ನಂತರ ಕಂಡು ಬರುವ ಬೀಜದಿಂದ ವೃದ್ಧಿಯಾಗುವ ಏಕವಾರ್ಷಿಕ ಹುಲ್ಲಿನ ಜಾತಿಗೆ ಸೇರಿದ ಕಳೆಗಳ ಹತೋಟಿಗೆ ಪ್ರತಿ ಲೀ. ನೀರಿಗೆ 1.4 ಮಿ.ಲೀ. ತರಗಾ ಸೂಪರ್ 5 ಇ.ಸಿ. ಅಥವಾ 0.7 ಮಿ.ಲಿ. ಸೊಸೈಟಿ 10 ಇ.ಸಿ. ಕಳೆನಾಶಕವನ್ನು ಬೆಳೆಯಲ್ಲಿರುವ ಕಳೆಗಳಿಗೆ ಸಿಂಪಡಿಸಬೇಕು.

ನೀರಾವರಿ : ನೀರಿನ ಸೌಲಭ್ಯವಿದ್ದಲ್ಲಿ ಬೆಳೆಯು ಹೂವಾಡುವ ಹಂತದಲ್ಲಿ ಇದ್ದಾಗ ಒಂದು ಸಲ ತೆಳ್ಳಗೆ ನೀರೂ ಹಾಯಿಸಬೇಕು.

ಪೋಷಕಾಂಶಗಳ ಸಿಂಪರಣೆ : ಬೆಳೆಯು ಹೂವಾಡುವ ಹಾಗೂ ಕಾಳು ಕಟ್ಟು ಹಂತದಲ್ಲಿ ಇದ್ದಾಗ ಪ್ರತಿ ಲೀಟರ್ ನೀರಿಗೆ 10 ಗ್ರಾಂ 19:19:19 ಅನ್ನು ಸಿಂಪರಣೆ ಮಾಡಬೇಕು.

ಕೀಟಗಳು ಹಾಗೂ ಅವುಗಳ ನಿಯಂತ್ರಣ : ಸಸ್ಯಹೇನು ಹಾಗೂ ಥ್ರಿಪ್ಸ್ ನುಶಿ, ಎಲೆ ತಿನ್ನುವ ಹಾಗೂ ಕಾಯಿ ಕೊರೆಯುವ ಹುಳಗಳನ್ನು ನಿಯಂತ್ರಿಸಲಿಕ್ಕೆ 1.7 ಮಿ.ಲೀ. ಡೈಮಿಥೋಯೆಟ್ 30 ಇ.ಸಿ 0.4 ಮೀ.ಲೀ. ಫ್ಲೋನಿಕಮಿಡ್ 50 ಡಬ್ಲ್ಯೂ. ಜಿ. ಅಥವಾ 1 ಮಿ.ಲೀ. ಮೋನೋಕ್ರೊಟೋಫಾಸ್ ಮತ್ತು ಮರಿಹುಳು ಹಾಗೂ ಕಾಯಿ ಕೊರೆಯುವ ಹುಳುಗಳಿಗೆ 0.5 ಮಿ.ಲೀ. ಫೆನವಲ್‌ರೇಟ್ 20 ಇ.ಸಿ. 0.67 ಮೀ.ಲೀ. ಇಂಡೋಕ್ಸಾಕಾರ್ಬ್ 14.5% ಎಸ್. ಸಿ. ಅಥವಾ 2 ಮಿ.ಲೀ. ಕ್ವಿನಾಲ್‌ಫಾಸ್ 25 ಇ.ಸಿ. ಅನ್ನು ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪರಣೆ ಮಾಡಬೇಕು. ಅಗ್ರೋಮೈಜಿಡ್ ನೊಣ ನಿಯಂತ್ರಿಸಲು ಬಾಡುತ್ತಿರುವ ಸಸಿಗಳನ್ನು ಕಿತ್ತು ನೆಲದಲ್ಲಿ ಹೂಳುವುದು ಹಾಗೂ ಪ್ರತಿ ಲೀ. ನೀರಿಗೆ 0.3 ಮಿ.ಲಿ. ಇಮಿಡಾಕ್ಲೋಪ್ರಿಡ್ 17.8 ಎಸ್.ಎಲ್. ಅಥವಾ 0.2 ಗ್ರಾಂ ಥೈಯಾಮಿಥಾಕ್ಸಾನ್ 25 ಡಬ್ಲ್ಯೂ.ಜಿ. ಅಥವಾ 1.7 ಮಿ.ಲಿ. ಡೈಮಿಥೋಯೆಟ್ 30 ಇ.ಸಿ. ಅಥವಾ 0.5 ಮಿ.ಲಿ. ಫಾಸ್ಫಾಮಿಡಾನ್ 85 ಡಬ್ಲ್ಯೂ.ಎಸ್.ಸಿ. ಸಿಂಪಡಿಸಬೇಕು.

ರೋಗಗಳು ಹಾಗೂ ಅವುಗಳ ನಿಯಂತ್ರಣ : ನಂಜು ರೋಗಕ್ಕೆ ತುತ್ತಾದ ಸಸಿಗಳನ್ನು ಪ್ರಾರಂಭ ಹಂತದಲ್ಲಿ ಕಿತ್ತು ಸುಡಬೇಕು. ಮತ್ತು ಬೂದಿ ರೋಗ ತಗುಲಿದರೆ 0.5 ಮಿ.ಲೀ. ಪ್ರೋಪಿಕೋನಾಜೋಲ್ 25 ಇ.ಸಿ. ಪ್ರತಿ ಲೀ. ನೀರಿಗೆ ಬೆರೆಸಿ ಸಿಂಪಡಿಸಬೇಕು. ಎಲೆಚುಕ್ಕೆ ರೋಗವನ್ನು ನಿಯಂತ್ರಿಸಲಿಕ್ಕೆ ಪ್ರತಿ ಲೀ. ನೀರಿಗೆ 2 ಗ್ರಾಂ ಜೈನೆಬ್ 75 ಡಬ್ಲ್ಯೂ.ಪಿ. ಅಥವಾ ಮೆಂಕೋಜೆಬ್ 75 ಡಬ್ಲ್ಯೂ.ಪಿ. ಅಥವಾ 3 ಗ್ರಾಂ ತಾಮ್ರದ ಆಕ್ಸಿಕ್ಲೋರೈಡ್ 50 ಡಬ್ಲ್ಯೂ. ಪಿ. ಬೆರೆಸಿ ಸಿಂಪಡಿಸಬೇಕು.

ಬೆಳೆಯು ಮಾಗುವ ಹಂತದಲ್ಲಿದ್ದಾಗ 5.0 ಮಿ.ಲೀ. ಪ್ಯಾರಾಕ್ವಾಟ ಪ್ರತಿ ಲೀ. ನೀರಿಗೆ ಬೆರೆಸಿ ಸಿಂಪಡಿಸುವುದರಿಂದ ಎಲೆಗಳು ಉದುರಿ ಕಾಯಿ ಬಿಡಿಸುವುದಕ್ಕೆ ಅನುಕೂಲವಾಗುತ್ತದೆ.

ಕಟಾವಾದ ನಂತರ ಕಾಳನ್ನು ಸ್ಪೈರಲ್ ಸಪರೇಟರ್ ಮುಖಾಂತರ ಶ್ರೇಣಿಕರಣ ಮಾಡಿದರೆ, ತೂರಿ ಹಸನುಗೊಳಿಸಲು ವ್ಯಯವಾಗುವ ಕೃಷಿ ಕಾರ್ಮಿಕರ ಮೇಲಿನ ಅವಲಂಬನೆಯನ್ನು ತಪ್ಪಿಸಬಹುದಲ್ಲದೆ ಶ್ರೇಣಿಕೃತ ಧಾನ್ಯಗಳಿಗೆ ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆ ಪಡೆಯಬಹುದು.

ಲೇಖಕರು: ಡಾ. ಮಲ್ಲರೆಡ್ಡಿ
ಡಾ. ತಿಮ್ಮಣ್ಣ
ಡಾ. ಶ್ರೀವಾಣಿ ಜಿ.ಎನ್
ಇಂ. ವೀಣಾ ಟಿ.
ಡಾ. ಉಮೇಶ ಬಾಬು ಜಿ. ಎಸ್.
ಡಾ. ವೀಣಾ ಎಸ್. ಕಂಬಳಿ
ಡಾ. ಅಫ್ಸಾನಬಾನು ಮಾಣಿಕ್

ಪುಟ ವಿನ್ಯಾಸ &
ಅಕ್ಷರ ಜೋಡಣೆ : ಶ್ರೀ. ದೇವರಾಜ ನಾಯಕ್

ಗೌರವ ಸಲಹೆಗಾರರು : ಡಾ. ಎ ಆರ್ ಕುರುಬರ
ವಿಸ್ತರಣಾ ನಿರ್ದೇಶಕರು,
ಕೃ.ವಿ.ವಿ., ರಾಯಚೂರು

UASR/PC/LL-28C/2025-26



ಕೃಷಿ ವಿಶ್ವವಿದ್ಯಾಲಯ, ರಾಯಚೂರು
ಕೃಷಿ ವಿಸ್ತರಣಾ ನಿರ್ದೇಶನಾಲಯ
ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ಬೇಸಿಗೆ ಭತ್ತಕ್ಕೆ ಪರ್ಯಾಯವಾಗಿ ಉದ್ದಿನ ಬೆಳೆ



ಪ್ರಕಾಶಕರು :

ಕಾರ್ಯಕ್ರಮ ಸಂಯೋಜಕರು
ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು
ಅಂಚೆ ಪೆಟ್ಟಿಗೆ ಸಂಖೆ–329, ರಾಯಚೂರು–584102
ದೂರವಾಣಿ ಸಂಖ್ಯೆ: 0832–220196
e-mail: kvkraichur@gmail.com